ವಿಶೇಷ ಘಟಕ ಯೋಜನೆಯಲ್ಲಿ 20 ಜನ ರೈತರಿಗೆ ಮತ್ತು ಐವತ್ತು ಪರ್ಸೆಂಟ್ ದರದಲ್ಲಿ ಕ್ರಿಮಿನಾಶಕ 500 ಜನ ರೈತರಿಗೆ, ಅಣಬೆ ತರಬೇತಿ 95 ಜನ ರೈತರಿಗೆ, ರೈತರ ಪ್ರವಾಸ 45 ಜನರಿಗೆ ಮತ್ತು ಸರ್ಕಾರಿ ಪ್ರೊಡಕ್ಷನ್ ಸೆಂಟರ್ 25 ಒಟ್ಟು 859 ಫಲಾನುಭವಿಗಳಿಗೆ ಈಗಾಗಲೇ ತೋಟಗಾರಿಕಾ ಇಲಾಖೆಯಿಂದ ಉತ್ತೇಜನ ಕೊಡಬೇಕೆಂದು ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ ಅದೂ ಕೂಡ ಬೆಳೆಯಲಿಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಈಗ ಬಾದಾಮಿ ತಾಲ್ಲೂಕಿನಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯುವುದಕ್ಕೆ ಬಹಳ ಒಳ್ಳೆಯ ಭೂಮಿ ನೀರು ಇದೆ, ಅದಕ್ಕೆ ಪ್ರೋತ್ಸಾಹ ಆಗುವ ರೀತಿಯೊಳಗೆ ಒಂದು ಹಾರ್ಟಿಕಲ್ಚರ್ ಫಾರಂ ಅನ್ನು ಸರ್ಕಾರದ ವತಿಯಿಂದ ತೆಗೆಯುವುದಕ್ಕೆ ಸಾಧ್ಯವೇ? ಅದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರೋ?

ಶ್ರೀ ಡಿ.ಟಿ. ಜಯಕುಮಾರ್ : ಸರ್ಕಾರಿ ಜಮೀನು ಇದ್ದರೆ ಅದನ್ನು ಅಭಿವೃದ್ಧಿ ಪಡಿಸುವ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ನಾವು ಜಮೀನನ್ನು ಕೊಡಿಸುತ್ತೇವೆ.

ಮುದ್ರಾಂಕ ಶುಲ್ಕದಿಂದ ಆದಾಯ

582 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದಿಂದ ರಚಿಸಲ್ಪಟ್ಟ ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯ ನಿರ್ಧರಣಾ ಸಮಿತಿಗಳು ವರದಿ ಸಲ್ಲಿಸುವುದಕ್ಕಿಂತ ಮೊದಲು ಹಾಗೂ ನಂತರ ರಾಜ್ಯದ ಬೊಕ್ಕಸಕ್ಕೆ ನೋಂದಣಿಯಿಂದ ಸಂದಾಯವಾದ ಒಟ್ಟು ಮುದ್ರಾಂಕ ಶುಲ್ಕದ ಆದಾಯ?

ಆ) ಸಮಿತಿಯು ಸಲ್ಲಿಸಿದ ವರದಿಯನ್ನು ಸರ್ಕಾರದಿಂದ ಮರು-ಪರಿಗಣಿಸುವ ಪ್ರಸ್ತಾವನೆ ಏನಾದರೂ ಇದೆಯೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) 1996-97ನೇ ಸಾಲಿನಲ್ಲಿ ಬೆಂಗಳೂರು ನಗರದ ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ, ಯಲಹಂಕ, ಆನೇಕಲ್, ಕೆ.ಆರ್. ಪುರಂ ಉಪ-ನೋಂದಣಿ ಕಛೇರಿಗಳಿಗೆ ಸಂಬಂಧಿಸಿದಂತೆ ದಿನಾಂಕ : 19-11-96ರಿಂದ ಜಾರಿಗೆ ಬರುವಂತೆ ದಿನಾಂಕ: 13-11-96ರಂದು ಸರ್ಕಾರದ ಅಧಿಸೂಚನೆ ಸಂ. ಆರ್‌ಡಿ 480 ಮುನೋಮು 95 ಹಾಗೂ ಬೆಂಗಳೂರು ನಗರದ ಇನ್ನುಳಿದ ಉಪ-ನೋಂದಣಿ ಕಛೇರಿಗಳಾದ ಗಾಂಧಿನಗರ, ಶಿವಾಜಿನಗರ, ರಾಜಾಜಿನಗರ, ಜಯನಗರ, ಬಸವನಗುಡಿ, ಶ್ರೀರಾಮಪುರಂಗಳಿಗೆ ಸಂಬಂಧಿಸಿದಂತೆ ದಿನಾಂಕ : 18-2-97ರಿಂದ ಜಾರಿಗೆ ಬರುವಂತೆ ದಿನಾಂಕ : 20-1-97ರಂದು ಸರ್ಕಾರದ ಅಧಿಸೂಚನೆ

ಸಂ.ಆರ್.ಡಿ. 100 ಮುನೋಮು 95ರ ಮೂಲಕ ಸ್ಥಿರಾಸ್ತಿಗಳ ಅಂದಾಜು ಮಾರುಕಟ್ಟೆ ಬೆಲೆಯನ್ನು ಪ್ರಚುರ ಪಡಿಸಲಾಗಿದ್ದು ಈ ಅಧಿಸೂಚನೆ ಪೂರ್ವದಲ್ಲಿ ಅಂದರೆ ಏಪ್ರಿಲ್ 96ರಿಂದ ಅಕ್ಟೋಬರ್, 96 ರವರೆಗೆ ಈ ಕೆಳಗೆ ತೋರಿಸಿದ ರೀತಿ ಬೆಂಗಳೂರು ನಗರ ಜಿಲ್ಲೆಯಲ್ಲಿ ರಾಜಸ್ವ ಸಂಗ್ರಹವಾಗಿದೆ:

ಕ್ರಮ ಸಂಖ್ಯೆ	ತಿಂಗಳು	ರಾಜಸ್ವ (ಕೋಟಿ ರೂ.ಗಳಲ್ಲಿ)
1.	ಏಪ್ರಿಲ್, 96	14.47
2.	ಮೇ, 96	15.85
3.	ಜೂನ್, 96	16.57
4.	ಜುಲೈ, 96	16.81
5.	ಆಗಸ್ಟ್, 96	16.91
6.	ಸೆಪ್ಟೆಂಬರ್, 96	14.76
7.	ಅಕ್ಟೋಬರ್, 96	13.70
	ಒಟ್ಟು	**109.07** ಕೋಟಿ

ಅಧಿಸೂಚನೆ ಜಾರಿಗೊಳಿಸಿದ ನಂತರ ಬೆಂಗಳೂರು ನಗರ ಜಿಲ್ಲೆಯಲ್ಲಿ ಈ ಕೆಳಗೆ ತೋರಿಸಿದ ರೀತಿ ರಾಜಸ್ವ ಸಂಗ್ರಹವಾಗಿದೆ:

ಕ್ರಮ ಸಂಖ್ಯೆ	ತಿಂಗಳು	ರಾಜಸ್ವ (ಕೋಟಿ ರೂ.ಗಳಲ್ಲಿ)
1.	ಸೆಪ್ಟೆಂಬರ್, 96	15.30
2.	ಡಿಸೆಂಬರ್, 96	14.90
3.	ಜನವರಿ, 97	15.63
4.	ಫೆಬ್ರವರಿ, 97	14.48
5.	ಮಾರ್ಚ್, 97	18.72
6.	ಏಪ್ರಿಲ್, 97	23.34
7.	ಮೇ, 97	21.84
8.	ಜೂನ್, 97	22.38
9.	ಜುಲೈ, 97	23.82
	ಒಟ್ಟು	**170.41** ಕೋಟಿ

ರಾಜ್ಯಾದ್ಯಂತ ಬೆಂಗಳೂರು ಜಿಲ್ಲೆಯನ್ನು ಒಳಗೊಂಡಂತೆ ಏಪ್ರಿಲ್ 96ರಿಂದ ಅಕ್ಟೋಬರ್ 96ರವರೆಗೆ ಈ ಕೆಳಗೆ ತೋರಿಸಿದ ರೀತಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ರಾಜಸ್ವ ಸಂಗ್ರಹವಾಗಿದೆ:

ಕ್ರಮ ಸಂಖ್ಯೆ	ತಿಂಗಳು	ರಾಜಸ್ವ (ಕೋಟಿ ರೂ.ಗಳಲ್ಲಿ)
1.	ಏಪ್ರಿಲ್, 96	20.75
2.	ಮೇ, 96	42.01
3.	ಜೂನ್, 96	41.78
4.	ಜುಲೈ, 96	42.54
5.	ಆಗಸ್ಟ್, 96	20.41
6.	ಸೆಪ್ಟೆಂಬರ್, 96	79.29
7.	ಅಕ್ಟೋಬರ್, 96	19.45
	ಒಟ್ಟು	**266.32** ಕೋಟಿ

ರಾಜ್ಯಾದ್ಯಂತ ಬೆಂಗಳೂರು ಜಿಲ್ಲೆಯನ್ನು ಒಳಗೊಂಡಂತೆ ನವೆಂಬರ್ 96 ರಿಂದ ಜುಲೈ, 97 ರವರೆಗೆ ಈ ಕೆಳಗೆ ತೋರಿಸಿದ ರೀತಿ ರಾಜಸ್ವ ಸಂಗ್ರಹಣೆಯಾಗಿದೆ:

ಕ್ರಮ ಸಂಖ್ಯೆ	ತಿಂಗಳು	ರಾಜಸ್ವ (ಕೋಟಿ ರೂ.ಗಳಲ್ಲಿ)
1.	ನವೆಂಬರ್, 96	58.35
2.	ಡಿಸೆಂಬರ್, 96	40.27
3.	ಜನವರಿ, 97	44.26
4.	ಫೆಬ್ರವರಿ, 97	43.92
5.	ಮಾರ್ಚ್, 97	40.05
6.	ಏಪ್ರಿಲ್, 97	49.56
7.	ಮೇ, 97	52.19
8.	ಜೂನ್, 97	52.58
9.	ಜುಲೈ, 97	55.29
	ಒಟ್ಟು	**436.92** ಕೋಟಿ

ಆ) ಹೌದು.

ಶ್ರೀ ಹೆಚ್. ಶಿವಪ್ಪ : ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆ ಕೇಳಿದ್ದುದು, ಈ ರಿಜಿಸ್ಟ್ರೇಷನ್ ಸ್ಟ್ಯಾಂಪ್ ಮಾರಾಟ ಏನು ಆಗುತ್ತದೆ, ಎಸ್ಟಿಮೇಷನ್ ಆಫ್ ಮಾರ್ಕೆಟ್ ವಾಲ್ಯುಯೇಷನ್ ಎಂದು ಹೇಳಿ ಅದಕ್ಕೆ ಒಂದು ಸಮಿತಿ ಮಾಡಿಬಿಟ್ಟು ಅದರ ಆಧಾರದಮೇಲೆ ರಿಜಿಸ್ಟ್ರೇಷನ್ ಮಾಡಬೇಕೆಂದು ಹೇಳಿದ್ದೀರಿ. ಅದಕ್ಕಿಂತ ಮುಂಚಿತವಾಗಿ ಎಷ್ಟು ಹಣ ರಾಜಸ್ವಕ್ಕೆ ಬಂದಿತ್ತು? ಇದಾದನಂತರ ಎಷ್ಟು ಹಣ ಬಂದಿದೆ ಎಂಬುದು ನನ್ನ ಮೊದಲನೆಯ ಪ್ರಶ್ನೆ. ನಂತರ ಬೇರೆ ಜಿಲ್ಲೆಗಳಲ್ಲಿ, ಇವರು ಕೇವಲ ಬೆಂಗಳೂರು ಜಿಲ್ಲೆಗೆ ಮಾತ್ರ ಸೀಮಿತವಾಗಿ ಕೊಟ್ಟಿದ್ದಾರೆ, ಬೇರೆ ಜಿಲ್ಲೆಗಳಿಗೆ ವಾಲ್ಯುಯೇಷನ್ ಕಮಿಟಿ ರಿಪೋರ್ಟ್ ಬಂದಿಲ್ಲವೇ? ಇದರ ಬಗ್ಗೆ ನನಗೆ ಉತ್ತರ ಕೊಡಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಈ ವಾಲ್ಯುಯೇಷನ್ ಕಮಿಟಿಗಿಂತ ಮೊದಲು ಆದಾಯ ಎಷ್ಟು ಬರುತ್ತಿತ್ತು ಎಂಬುದನ್ನು ನಾನು ಅಂಕಿಅಂಶಗಳ ಸಮೇತ ಕೊಟ್ಟಿದ್ದೇನೆ, ಆಮೇಲೆ ವಾಲ್ಯುಯೇಷನ್ ಕಮಿಟಿ ಬಂದಮೇಲೆ ಎಷ್ಟು ಆದಾಯ ಬಂತು ಎಂಬುದರ ಬಗ್ಗೆಯೂ ಸಹ ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ಆದರೆ ವಾಲ್ಯುಯೇಷನ್ ಕಮಿಟಿಯವರು ರಿಪೋರ್ಟ್ ಕೊಟ್ಟಮೇಲೆ ಅದರ ಪ್ರಕಾರ ವಾಲ್ಯುಯೇಷನ್ ಫಿಕ್ಸ್ ಮಾಡಿದ್ದು ಜಾಸ್ತಿ ಆಯಿತು ಎಂಬ ಕಾರಣಕ್ಕಾಗಿ ನಮ್ಮ ರಿಜಿಸ್ಟ್ರೇಷನ್ ಫೀ ಕಡಿಮೆ ಬಂದಿಲ್ಲ. ಅಧ್ಯಕ್ಷರೆ, ಇದು ವಾಲ್ಯುಯೇಷನ್ ಕಮಿಟಿ ರಿಪೋರ್ಟ್ ಕೊಟ್ಟಮೇಲೆ ಏನು ನಾವು ರಿಜಿಸ್ಟ್ರೇಷನ್ ಫಿಕ್ಸ್ ಮಾಡಿದ್ದೆವು, ಹಾಗೆ ಫೀ ಪಿಕ್ಸ್ ಮಾಡಿದ ಮೇಲೆ ಏನೂ ಕಡಿಮೆ ಆಗಲಿಲ್ಲ. ಅದರ ಹಿಂದೆ ಬೆಂಗಳೂರಿನಲ್ಲಿ ಲ್ಯಾಂಡ್ ವ್ಯಾಲ್ಯೂ ಜಾಸ್ತಿ ಇತ್ತು. ಆಗ ಯಾರೂ ಇದರ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಾ ಇರಲಿಲ್ಲ. ಈಗ ಲ್ಯಾಂಡ್ ವ್ಯಾಲ್ಯೂ ಬಹಳ ಕಡಿಮೆಯಾಗಿದೆ, ಒಂದೊಂದು ಏರಿಯಾದಲ್ಲಿ ಯಾವರೀತಿ ಆಗಿದೆ ಎಂದರೆ ಒಂದು ಎಕರೆಗೆ ಇಪ್ಪತ್ತು ಸಾವಿರ ರೂಪಾಯಿ ಲ್ಯಾಂಡ್ ವ್ಯಾಲ್ಯೂ ಫಿಕ್ಸ್ ಮಾಡಿದರೆ ಅದು ಎಂಟು ಸಾವಿರ ರೂಪಾಯಿಗೆ ಮಾರಾಟ ಮಾಡುವ ಪರಿಸ್ಥಿತಿ ಬೆಂಗಳೂರಿನ ಕೆಲವೊಂದು ಏರಿಯಾಕ್ಕೆ ಆಗಿದೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ವ್ಯಾಲ್ಯೂಯೇಷನ್ ಹೆಚ್ಚಾಗಿದೆ, ಕಡಿಮೆ ಮಾಡಿರಿ ಎನ್ನುವ ಉದ್ದೇಶ ಶಿವಪ್ಪನವರದ್ದು ಇರಬಹುದು. ಸರ್ಕಾರವೂ ಕೂಡ ಬೆಂಗಳೂರಿನಲ್ಲಿ ಬೆಲೆ ಹೆಚ್ಚಾಗಿರುವಂತಹದ್ದನ್ನು ಮನಗಂಡಿದೆ. ಇದರ ಬಗ್ಗೆ ನಾವು ಇನ್ನೊಂದು ಸಲ ಪರಿಷ್ಕರಣೆ ಮಾಡುತ್ತೇವೆ, ಇದರ ಬಗ್ಗೆ ರೀ ಎಗ್ಸಾಮಿನ್ ಮಾಡುತ್ತೇವೆ. ಆಮೇಲೆ ಬೇರೆ ಜಿಲ್ಲೆಗಳದ್ದು ಬಂದಿಲ್ಲವೆ ಎಂದು ಕೇಳಿದ್ದಾರೆ. ಬೇರೆ ಜಿಲ್ಲೆಗಳಿಂದ ವರದಿ ಇನ್ನೂ ಬಂದಿಲ್ಲ. ವರದಿ ಬಂದ ತಕ್ಷಣ ಬೇರೆ ಬೇರೆ ಜಿಲ್ಲೆಗಳಲ್ಲಿಯೂ ಇದನ್ನು ಜಾರಿಗೆತರತಕ್ಕಂಥ ಕೆಲಸವನ್ನು ಮಾಡುತ್ತೇವೆ. ಆ ವರದಿಗಳನ್ನು ಬೇಗ ಕಳುಹಿಸುವಂತೆ ಸುಮಾರು ಸುತ್ತೋಲೆಗಳನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕುಳುಹಿಸಿದ್ದೇವೆ. ಅವರು ಈವರೆಗೂ ಕಳುಹಿಸಿಲ್ಲ. ಸಾಧ್ಯವಾದರೆ ಪುನಃ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ನೀಡಿ ಈ ವ್ಯಾಲ್ಯಯೇಷನ್ ಕಮಿಟಿ ರಿಪೋರ್ಟ್‌ನ್ನು ತರಿಸಿಕೊಳ್ಳತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ.

ಶ್ರೀ ಹೆಚ್. ಶಿವಪ್ಪ : ಅಧ್ಯಕ್ಷರೆ, ಈ ಕ್ರಮದಿಂದ ಈ ರಿಜಿಸ್ಟ್ರೇಷನ್ ಅಂಡರ್ ವ್ಯಾಲ್ಯೂಯೇಷನ್ ಮೇಲೆ ಮಾಡುತ್ತಿದ್ದಾರೆ. ಇದು ಜಾಸ್ತಿ ಆಯಿತು ಎಂದು ಹೇಳಿ ಬಹಳ ಜನ ರಿಜಿಸ್ಟ್ರೇಷನ್‌ನನ್ನು ಬಿಟ್ಟಿರುವುದರಿಂದ ಈಗ ಸಂಖ್ಯೆ ಏನು ಇದೆ ಅಂಡರ್ ವ್ಯಾಲ್ಯೂಯೇಷನ್ ಮಾಡಿ ಅವು ಆ ಪತ್ರಗಳು

ಜಾಸ್ತಿ ಆಗಿದ್ದಾವೆ. ಆಪೀಲು ಹೋಗತಕ್ಕಂಥ ಪತ್ರಗಳು ಜಾಸ್ತಿಯಾಗಿ ಇನ್ನೂ 4-5 ವರ್ಷಗಳವರೆಗೆ ಅವು ತೀರ್ಮಾನ ಆಗದೇ ಇರತಕ್ಕಂಥ ಪರಿಸ್ಥಿತಿಗಳಿಗೆ ಬಂದು ನಮಗೆ ಒರಿಜಿನಲ್ ಡಾಕ್ಯುಮೆಂಟ್ಸ್ ಸಿಕ್ಕದೇ ಇದುದ್ದರಿಂದ ಬೇರೆ ಸಾಲ ವಗೈರೆ ಇವುಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅದು ತಮ್ಮ ಗಮನಕ್ಕೆ ಬಂದಿದೆಯೇ? ಈ ರೈತರಿಗೆ ಆಗತಕ್ಕಂಥ ತೊಂದರೆಯನ್ನು ತತ್‌ಕ್ಷಣ ಪರಿಶೀಲನೆ ಮಾಡಿ ರೈತರಿಗೆ ಅನುಕೂಲ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಅಥವಾ ಬೆಂಗಳೂರು ಸುತ್ತಲೂ ರೈತನಿಗೆ ತನ್ನ ಜನ್ಮದಲ್ಲಿ ಖರೀದಿಮಾಡುವ ಶಕ್ತಿ ನಿಜವಾಗಿಯೂ ಇಲ್ಲ. ಅಲ್ಲಿ ಖರೀದಿ ಮಾಡಿದವರು ರಿಯಲ್ ಎಸ್ಟೇಟ್‌ನವರು, ಮೀಡಿಯೇಟರ್ಸ್, ಆಮೇಲೆ ಇಂಡಸ್ಟ್ರಿಯಲಿಸ್ಟ್ಸ್, ಇಲ್ಲ ಎಲ್ಲೋ ಕಾಶ್ಮೀರ, ದೆಹಲಿಯಿಂದ ಬಂದವರು ಮಾತ್ರ ಈ ಬೆಂಗಳೂರಿನಲ್ಲಿ ಖರೀದಿ ಮಾಡಲಿಕ್ಕೆ ಸಾಧ್ಯ ಇದೆ. ಆದರೆ ಒಂದು ಏನೆಂದರೆ ನಮ್ಮ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ಇಲ್ಲಪ್ಪ ನೀವು ವ್ಯಾಲ್ಯೂ ಪ್ರಕಾರ ರಿಜಿಸ್ಟ್ರೇಷನ್ ಮಾಡಿಕೋ ಎಂದು ಹೇಳಿದಾಗ ಇವರು ಅಬ್ಜೆಕ್ಟ್ ಮಾಡುತ್ತಾರೆ. ಯಾರು ಸೇಲ್ ಮಾಡುತ್ತಿರುತ್ತಾರೆ ಅವರು ಇಲ್ಲ ಅದು ಅಂಡರ್ ವಾಲ್ಯೂಯೇಷನ್‌ಗೆ ಹೋದರೂ ಹೋಗಲಿ ನೀವು ರಿಜಿಸ್ಟ್ರೇಷನ್ ಮಾಡಿಕೊಳ್ಳಿ ಎಂದು ಹೇಳಿದ ಮೇಲೆ ಸಬ್‌ರಿಜಿಸ್ಟ್ರಾರ್ ಅದನ್ನು ನಿರಾಕರಿಸಲಿಕ್ಕೆ ಯಾವುದೇ ಅವಕಾಶ ಇಲ್ಲ. ಅವರು ಹೇಳಿದ ಪ್ರಕಾರ ಮಾಡಿಕೊಳ್ಳುತ್ತಾರೆ, ಅದನ್ನು ಅಂಡರ್ ವಾಲ್ಯೂಯೇಷನ್‌ಗೆ ಕಳುಹಿಸುತ್ತಾರೆ. ಇದು ನಮ್ಮ ಗಮನಕ್ಕೆ ಬಂದಿದೆ. ಬೆಂಗಳೂರು ನಗರದಲ್ಲಿ ನಮ್ಮ ಜಿಲ್ಲಾ ನೋಂದಣಿ ಕಛೇರಿ ಏನು ಇದೆ ಅಲ್ಲಿ ಹುಚ್ಚು ಕೇಸುಗಳು ಇದ್ದಾವೆ. ಆದರೆ ಬೇಗ ಅವನ್ನೆಲ್ಲಾ ಇತ್ಯರ್ಥ ಮಾಡಿ ಎಂದು ನಿಮ್ಮ ಪರವಾಗಿ ಸರ್ಕಾರ ಅವರಿಗೆ ಸೂಚನೆಯನ್ನು ನೀಡುತ್ತದೆ.

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಗ್ರಾಮದಲ್ಲಿ ಗಂಗೂರು ಎಂದು. ಊರಟ್ಟಿಗೋಸ್ಕರ ಸ್ವಲ್ಪ ಜಮೀನನ್ನು ವ್ಯಾಪಾರ ಮಾಡಿದೆ, ನನ್ನ ಹೆಸರಿಗೆ ಬರೆಸಿದೆ. ನಾವು ವಾಸ್ತವವಾಗಿ ಕೊಟ್ಟಿರುವುದು ಆರು ಸಾವಿರ ರೂಪಾಯಿ. ಸ್ಟ್ಯಾಂಪ್ ಡ್ಯೂಟಿ ಕೇಳುವುದು 5,800, ನಾವು ಕೊಟ್ಟಿರುವುದು 6,000. ಕಣ್ಣು ಮುಚ್ಚಿಕೊಂಡು, ಏಕೆ ಹೇಳುತ್ತೇನೆ ಎಂದರೆ ಆಕ್ಟ್ ಪ್ರಾವಿಷನ್ ಏನು ಇದೆ, ಮಾರ್ಕೆಟ್ ವಾಲ್ಯೂ ಡಿಸೈಡ್ ಮಾಡಬೇಕಾದವರು ನಿಮ್ಮ ಡಿ.ಸಿ. ಅಂದರೆ ನಿಮ್ಮ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್. ಸರ್ಕಾರದವರು ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವೇ ಇಲ್ಲ. ಈಗ ನಾವು ಹೈಕೋರ್ಟ್‌ನಲ್ಲಿ ಸ್ಟೇ ತೆಗೆದುಕೊಂಡಿದ್ದೇವೆ. ಇದು ಮಕ್ಕಿ ಕಾಮಕ್ಕಿ ಇಲ್ಲಿ ಕುಳಿತುಕೊಂಡು ಏನೋ ಖುಷಿ ಬಂತು ಮಾಡುವುದು. ಜಾಲಪ್ಪನವರಿಗೆ ಖುಷಿ ಬಂತು ಎಂದು ಒಂದು ಆರ್ಡರ್ ಇಷ್ಯೂ ಮಾಡಿದರು, ಎಲ್ಲಾ ಕಡೆ ಇದೇ ಆಗಿದೆ. ಇದರಿಂದ ಆಗತಕ್ಕಂಥ ಅನಾಹುತವನ್ನು ನೋಡಬೇಕಲ್ಲಾ ಆದ್ದರಿಂದ ದಯಮಾಡಿ ಅದು ಏನು ಆ ರೀತಿ ಮಾಡಿದ್ದಾರೆ ಅದನ್ನು ತೆಗೆದು ನಿಮ್ಮ ಡಿಸ್ಟ್ರಿಕ್ ರಿಜಿಸ್ಟ್ರಾರ್‌ಗೆ ಕೊಡಿ. ಅವರದೇನು ಅಂಡರ್ ವಾಲ್ಯೂಯೇಷನ್ ಇದ್ದರೆ, ಅವರೇ ಅಧಿಕಾರ ಉಳ್ಳವರಾಗಿರುತ್ತಾರೆ, ಲೋಕಲ್ ಆಗಿಯೂ ಕೂಡ ಇರುತ್ತಾರೆ ಅವರಿಗೆ ಮಾರ್ಕೆಟ್ ವಾಲ್ಯೂ ಎಲ್ಲಿ ಎಷ್ಟಿರುತ್ತದೆ ಎಂದು ಗೊತ್ತಿರುತ್ತದೆ. ನಿಮ್ಮ ಬೆಂಗಳೂರಿನಲ್ಲಿ ಜಾಸ್ತಿ ಇದ್ದರೆ ಇದನ್ನೇ ಎಲ್ಲಾ ಜಿಲ್ಲೆಗೆ ಅಪ್ಲೈ ಮಾಡಿಬಿಟ್ಟರೆ ಎಲ್ಲಿಗೂ ಹೋಗಬೇಕು? ಆದ್ದರಿಂದ ಆ ಆಕ್ಟ್ ಏನು ಮಾಡಿದ್ದೀರೋ ಅದನ್ನು ವಿತ್‌ಡ್ರಾ ಮಾಡಿ, ಹೊಸದಾಗಿ ಮಾಡುವುದಕ್ಕೆ ತ್ವರಿತವಾಗಿ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಹೆಚ್. ಶಿವಪ್ಪ : ಈ ವಾಲ್ಯೂಯೇಷನ್ ಕಮಿಟಿಗೆ ಸರ್ಕಾರದವರು ಹೀಗೆಯೇ ಮಾಡಬೇಕೆಂದು ಗೈಡ್‌ಲೈನ್ಸ್ ಕೊಟ್ಟಿದ್ದಾರಾ? ಆಮೇಲೆ ಸೈಂಟಿಫಿಕ್ ಆಗಿ ಮಾಡಲಿಕ್ಕೆ ಯಾರಾದರೂ ಎಕ್ಸ್‌ಪರ್ಟ್ಸ್‌ಗಳನ್ನು ಈ ಸಮಿತಿಯಲ್ಲಿ ಇನ್ವಾಲ್ವ್ ಮಾಡಿದ್ದೀರಾ? ಯಾವ ಆಧಾರದಮೇಲೆ ಮಾಡುತ್ತಿದ್ದೀರಿ?

ಶ್ರೀ ರಮೇಶ್ ಸಿ. ಜಿಗಜಿಣಗಿ : ಅಧ್ಯಕ್ಷರೆ, ಕಾನೂನು ಪ್ರಕಾರ ಇದೇ ರೀತಿ ಮಾಡುವುದು. ಆದರೆ ಹಿರಿಯ ಸದಸ್ಯರಾಗಿರತಕ್ಕಂಥ ತಾವು ಯಾವುದೋ ಒಂದು ಉದಾಹರಣೆಯನ್ನು ಹೇಳಿದಿರಿ, ಆದರೆ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಈಗ ಆರ್.ಟಿ. ನಗರದಲ್ಲಿ ನಾನು ಇದ್ದೇನೆ. ಅಲ್ಲಿ ವಾಲ್ಯೂಯೇಷನ್ ಕಮಿಟಿಯವರು ಐದುನೂರು ರೂಪಾಯಿ ಎಂದು ವರದಿ ಕೊಟ್ಟಿದ್ದಾರೆ. ನಿಜವಾಗಿಯೂ ಇವೊತ್ತು ಲ್ಯಾಂಡ್ ವ್ಯಾಲ್ಯೂ ಕಡಿಮೆಯಾಗಿದೆ ಎಂದರೆ ಆರ್.ಟಿ. ನಗರದಲ್ಲಿ ಹನ್ನೊಂದುನೂರು ರೂಪಾಯಿ ಚದರ ಅಡಿಗಿಂತ ಕಡಿಮೆ ಮಾರುವುದಿಲ್ಲ. ಆದರೂ ನಾವು ಫಿಕ್ಸ್ ಮಾಡುವುದು 50 ಪರ್ಸೆಂಟ್ ಇದೆ. ಕೆಲವೊಂದು ಏರಿಯಾದಲ್ಲಿ ಹಾಗೆ ಆಗಿದೆ. ಅದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ, ಅದಕ್ಕೆ ರೀ ಎಗ್ರಾಮಿನ್ ಮಾಡಿಸುತ್ತೇನೆ.

ವಿಟ್ಲದಲ್ಲಿ ಕೃಷಿ ಮಾರುಕಟ್ಟೆಗೆ ಸೇರಿದ ರಸ್ತೆಗಳ ಅಭಿವೃದ್ಧಿ

583 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಟ್ಲ ಕ್ಷೇತ್ರದಲ್ಲಿರುವ ಕೃಷಿ ಮಾರುಕಟ್ಟೆಗೆ ಸೇರಿದ ರಸ್ತೆಗಳ ಅಭಿವೃದ್ಧಿಗೆ 1995-96, 1996-97, 1997-98ನೇ ಸಾಲಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಆ) ಸದರಿ ರಸ್ತೆಗಳ ನಿರ್ವಹಣೆಗೆ (ಮೆಂಟನೆನ್ಸ್) ಸರ್ಕಾರವು ಹಣ ಬಿಡುಗಡೆ ಮಾಡಲಾಗಿದೆಯೇ, ಇಲ್ಲದಿದ್ದರೆ ಕಾರಣವೇನು?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ವಿಟ್ಲ ವಿಧಾನ ಸಭಾ ಕ್ಷೇತ್ರದಲ್ಲಿ 1995-96ನೇ ಸಾಲಿನ ಸಂಪರ್ಕ ರಸ್ತೆಗಳನ್ನು ಅಭಿವೃದ್ಧಿಪಡಿಸಲು 1996-97ನೇ ಸಾಲಿನಲ್ಲಿ ಕೈಗೊಂಡಿದ್ದು ರೂ. 15.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಇದೇ ರೀತಿ 1996-97ನೇ ಸಾಲಿನ ರಸ್ತೆಗಳನ್ನು 1997-98ನೇ ಸಾಲಿನಲ್ಲಿ ಅಭಿವೃದ್ಧಿಗೊಳಿಸಲು ರೂ. 15.00 ಲಕ್ಷಗಳನ್ನು ಬಿಡುಗಡೆ ಮಾಡಲು ಸಂಬಂಧಪಟ್ಟ ಸಮಿತಿಯ ಕಾರ್ಯದರ್ಶಿಯವರಿಗೆ ಸೂಚನೆ ನೀಡಲಾಗಿದೆ.

ಆ) ಸದರಿ ಪ್ರಸ್ತಾವನೆಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೆ, ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಐವತ್ತು ಕಿ.ಮೀ. ರಸ್ತೆಯನ್ನು ಕೃಷಿ ಮಾರುಕಟ್ಟೆಯವರು ತೆಗೆದುಕೊಂಡಿದ್ದಾರೆ. ಹಿಂದೆ ಸರ್ಕಾರವನ್ನು ಕೇಳಿದಾಗ ಜಿಲ್ಲಾ ಪಂಚಾಯತ್‌ಗೆ ಹಣ ಒದಗಿಸುತ್ತಾ ಇಲ್ಲ. ಆದುದರಿಂದ ಅದರ ಸುಧಾರಣೆಗೆ ಸಾಧ್ಯವಾಗುತ್ತಿಲ್ಲ.